ಕರ್ನಾಟಕ ಸರ್ಕಾರ

ಕಾಂ.ಆ.ಸು 8 /03-04

ನಿರ್ದೇಶಕರ ಕಚೇರಿ
ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳ ಇಲಾಖೆ, ಬೆಂಗಳೂರು
ದಿನಾಂಕ 03-06-2003

## ಸುತ್ತೋಲೆ

ವಿಷಯ : Computarised ಹಕ್ಕುದಾಖಲೆಗಳನ್ನು ಉಪಯೋಗಿಸುವ ಕುರಿತು

ಉಲ್ಲೇಖ : ಸರ್ಕಾರದ ವಿಶೇಷ ಕಾರ್ಯದರ್ಶಿಗಳು ಕಂದಾಯ ಇಲಾಖೆ (ಭೂಮಿ) ಇವರ ಆಸಪ.ಸಂ.RD 47 MRR 2000 ದಿ.26-05-03

ಸರ್ಕಾರವು ರಾಜ್ಯದ್ಯಾಂತ ಭೂಮಿ ಯೋಜನೆ ಅಡಿಯಲ್ಲಿ Computarised ಕಂದಾಯ ಭೂದಾಖಲೆಗಳನ್ನು ಜಾರಿಗೆ ತಂದಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಹಾಗೆಯೇ K.L.R ನಿಯಮಗಳಿಗೆ ಸೂಕ್ತ ತಿದ್ದುಪಡಿ /ಅಧಿಸೂಚನೆಗಳ ಮೂಲಕ ಕೈಬರಹದ/ಹಸ್ತಪ್ರತಿ ಕಂದಾಯ ಭೂದಾಖಲೆಗಳ ಉಪಯೋಗವನ್ನು ನಿಶೇಧಿಸಿರುತ್ತದೆ. ಈ ಬಗ್ಗೆ ಉಲ್ಲೇಖದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.

1. ಆದ್ದರಿಂದ ಇನ್ನು ಮುಂದೆ ಇಲಾಖೆಯಲ್ಲಿ ನಿರ್ವಹಿಸಲಾಗುವ ಯಾವುದೇ ಕಡತಗಳಿಗೆ ಕಂಪ್ಯೂಟರೈಸ್ಡ್ 1) RTC 2) Mutation Extract 3) Khatha Extract ಗಳನ್ನು ಮಾತ್ರ ಉಪಯೋಗಿಸುವಂತೆ ತಿಳಿಸಲಾಗಿದೆ.

2. ಒಂದು ವೇಳೆ ಕೈ ಬರಹ / ಹಸ್ತಪ್ರತಿಗಳನ್ನು ಉಪಯೋಗಿಸಿದಲ್ಲಿ ಸರ್ಕಾರಕ್ಕೆ ಅಥವಾ ಸಂಬಂಧಿಸಿದವರಿಗೆ ಉಂಟಾಗಬಹುದಾದ ನಷ್ಟ, ಅಥವಾ ತೊಂದರೆಗಳಿಗೆ ಸಂಬಂಧಿಸಿದ ಅಧಿಕಾರಿಗಳು / ನೌಕರರು ಹೊಣೆಗಾರರಾಗಿರುತ್ತಾರೆ.

ಈ ಸೂಚನೆಗಳು ತಕ್ಷಣದಿಂದ ಜಾರಿಗೆ ಬಂದಿದ್ದು ಎಲ್ಲಾ ಅಧಿಕಾರಿ / ನೌಕರರು ಕಡ್ಡಾಯವಾಗಿ ಅನುಷ್ಠಾನಕ್ಕೆ ತರುವಂತೆ ಸೂಚಿಸಿದೆ.ಸುತ್ತೋಲೆ ಸ್ವೀಕೃತಿ ಬಗ್ಗೆ ವರದಿ ಸಲ್ಲಿಸುವುದು.

ಸಹಿ/-
ನಿರ್ದೇಶಕರು
ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳ ಇಲಾಖೆ, ಬೆಂಗಳೂರು

R.K.

**ಪ್ರತಿಯನ್ನು**

1. ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ
2. ಕೇಂದ್ರ ಕಚೇರಿಯ ಎಲ್ಲಾ ಅಧಿಕಾರಿ ಮತ್ತು ಶಾಖಾಧಿಕಾರಿಗಳಿಗೆ
3. ಎಲ್ಲಾ ತಾಲ್ಲೂಕು ಭೂಮಾಪನ ಕಚೇರಿಗಳಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ತಿಳಿಸಿದೆ.

ನಿರ್ದೇಶಕರ ಪರವಾಗಿ
ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳ ಇಲಾಖೆ, ಬೆಂಗಳೂರು